



# ಮಂಜಿಭಾಯಿಯ ಕಲೆ!

ಮಂಜಿಭಾಯಿ ಲಾವಜಿಭಾಯಿ ರಮಣಿ ಅವರ ಪೇಂಟಿಂಗ್‌ಗಳನ್ನು ನೋಡಿದರೆ, ಕೈಗಳೇ ಇಲ್ಲದ ಕಲಾವಿದನೊಬ್ಬ, ಇಷ್ಟೊಂದು ಅತ್ಯದ್ಭುತವಾಗಿ ಕಲಾಕೃತಿಗಳನ್ನು ರಚಿಸಲು ಸಾಧ್ಯವೇ ಎಂದು ವಿಸ್ಮಯಗೊಳ್ಳುವುದು ಖಂಡಿತ. ರಾಜ್‌ಕೋಟ್‌ನ ಅಟ್ಕೋಟ್ ಎಂಬಲ್ಲಿ 1959ರಲ್ಲಿ ಜನಿಸಿದ ಮಂಜಿಭಾಯಿಯವರಿಗೆ ಬಾಲ್ಯದಿಂದಲೂ ಪೇಂಟಿಂಗ್ ಮಾಡುವುದರಲ್ಲಿ ಅಪಾರ ಅಸಕ್ತಿ. ಆದರೆ 10 ವರ್ಷದ ಬಾಲಕನಾಗಿದ್ದಾಗ ಅಪಘಾತವೊಂದರಲ್ಲಿ ಕೈಗಳೆರಡನ್ನೂ ಕಳೆದುಕೊಂಡ ಇವರಿಗೆ ಬಟ್ಟೆಯನ್ನೂ ಸಹ ತಾವೇ ಹಾಕಿಕೊಳ್ಳಲಾರದ ಸ್ಥಿತಿ ಬಂದೊದಗಿತು. ಆ ಸಮಯದಲ್ಲಿ ಜೊತೆಗೆ ಆಟವಾಡಲೂ ಯಾವ ಗೆಳೆಯರೂ ಒಪ್ಪದಿದ್ದಾಗ ತಾವೊಬ್ಬರೇ ಒಂಟಿಯಾಗಿ ಆಟವಾಡಿಕೊಂಡಿರುತ್ತಿದ್ದರಂತೆ. ಕೆಲವು ವರ್ಷಗಳಾದ ಮೇಲೆ 6 ನೇ ತರಗತಿಗೆ ಶಾಲೆಯನ್ನು ಸೇರಿ ನಂತರ ಎಸ್‌ಎಸ್‌ಎಲ್‌ಸಿ ಮುಗಿಸಿದರಂತೆ. 5 ವರ್ಷದ ಫೈನ್ ಆರ್ಟ್ಸ್ ಪದವಿ ಗಳಿಸಲು ಅಹಮದಾಬಾದ್ ಕಾಲೇಜಿಗೆ ಸೇರುವ ಮೊದಲು ಅಲ್ಲಿನ ಪ್ರಿನ್ಸಿಪಾಲ್ ಇವರನ್ನು ಸೇರಿಸಿಕೊಳ್ಳಲು ಅನುಮಾನಿಸಿ, 'ಚಿತ್ರ ಬಿಡಿಸಲು ಕೈಗಳಿರಲೇ ಬೇಕು' ಎಂದು ಹೇಳಿದರಂತೆ. ಆದರೆ ಮಂಜಿಭಾಯಿ ಅವರಿಗೆ ಸವಾಲು ಹಾಕಿ, ಪ್ರಾಯೋಗಿಕ ಪರೀಕ್ಷೆಯ ಮೂಲಕ ಪ್ರವೇಶ ಗಿಟ್ಟಿಸಿಕೊಂಡರು. ಉಳಿದ ಸಹಪಾಠಿಗಳೂ, ಕೈ ಇಲ್ಲದ ಇವರ ಸಾಮರ್ಥ್ಯವನ್ನು ಆಡಿಕೊಂಡರೂ, ಬಾಯಿಯಲ್ಲೇ ಬ್ರಷ್ ಹಿಡಿದು ಕಲಾಕೃತಿಗಳನ್ನು ರಚಿಸಿ ಅವರ ಬಾಯಿ ಮುಚ್ಚಿಸಿದರು. ಸಾಂಪ್ರದಾಯಿಕ ಕಲಾಕೃತಿ, ರೇಖೆಗಳ ಕಲಾಕೃತಿ, ಅಮೂರ್ತ ಕಲಾಕೃತಿಗಳನ್ನಲ್ಲದೇ ಇವರು ವ್ಯಕ್ತಿ ಚಿತ್ರಗಳನ್ನು ಮೂಡಿಸುವುದರಲ್ಲಿಯೂ ಸಿದ್ಧಹಸ್ತರು. ಹಿಂದಿ ನಟ ಸಲ್ಮಾನ್ ಖಾನ್ ಅವರ ಚಿತ್ರವನ್ನು ಬಿಡಿಸಿಕೊಟ್ಟು ಅವರಿಂದ ಪ್ರಶಂಸೆಯನ್ನೂ ಪಡೆದುಕೊಂಡಿರುವ ಇವರು ಹಲವಾರು ರಾಷ್ಟ್ರೀಯ ಮಟ್ಟದ ಪ್ರದರ್ಶನದ ಜೊತೆಗೆ ಏಕವ್ಯಕ್ತಿ ಪ್ರದರ್ಶನಗಳನ್ನೂ ಏರ್ಪಡಿಸಿದ್ದಾರೆ. ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಮಂಜಿಭಾಯಿಯವರು ಹಲವಾರು ಶಿಷ್ಯರಿಗೆ ತಮ್ಮ ಕಲೆಯನ್ನು ಧಾರೆಯೆರೆಯುತ್ತಿದ್ದಾರೆ.

■ **ಪ್ರಿಯಾಂಕ ವಿ.ಹೆಚ್.**